**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 20/06//2024 )**

**ಪಾಟೀ ಸವಾಲು :ಪ್ರತಿವಾದಿ 1 (ಬಿ) ಪರ ಶ್ರೀ ಎಂ ಜಿ ವಕೀಲರಿಂದ,**

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಕೃಷಿ ಕೆಲಸ ಮಾಡುತ್ತೇನೆ. ನಾನು ಒಂದನೇ ದರ್ಜೆಯ ಗುತ್ತಿಗೆದಾರನಾಗಿರುತ್ತೇನೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಬೆಳಕೆ ಗ್ರಾಮದಲ್ಲಿ 1 ಎಕರೆ 20 ಗುಂಟೆ ಜಮೀನು ಇರುತ್ತದೆ. ಸದ್ರಿ ಜಮೀನನ್ನು ನಾರಾಯಣ ತಿಮ್ಮಯ್ಯ ನಾಯ್ಕ ಎಂಬುವರಿಂದ ಖರೀದಿ ಮಾಡಿರುತ್ತೇನೆ. ಸದ್ರಿ ಖರೀದಿಗೆ ಸಂಬಂಧಿಸಿದಂತೆ ಸಿವಿಲ್ ದಾವೆಯನ್ನು ನಾರಾಯಣ ತಿಮ್ಮಯ್ಯ ನಾಯ್ಕ ರವರು ನನ್ನ ವಿರುದ್ಧ




ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದ ಸದ್ರಿ ದಾವೆ ನಮ್ಮ ಪರವಾಗಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದ್ರಿ ದಾವೆಯು ಇದೇ ನ್ಯಾಯಾಲಯದಲ್ಲಿ ಇತ್ತು. ಸದ್ರಿ ಆದೇಶದ ವಿರುದ್ಧ ನಾರಾಯಣ ತಿಮ್ಮಯ್ಯ ನಾಯ್ಕ ರವರು ಭಟ್ಕಳ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದ್ರಿ ದಾವೆಯನ್ನು ನಾರಾಯಣ ತಿಮ್ಮಯ್ಯ ನಾಯ್ಕ ರವರು ಕಬ್ಜಾ ವಹಿವಾಟಿ ಹೊಂದಿದ್ದರೂ ಸಹ ಸುಳ್ಳು ದಸ್ತಾವೇಜಿನ ಮೂಲಕ ಆ ಸ್ವತ್ತನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆಂದು ಸದ್ರಿ ಕ್ರಯ ದಾಖಲಾತಿಯನ್ನು ರದ್ದು ಮಾಡಲು ಕೇಸು ದಾಖಲಿಸಿದ್ದರು ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಸುಳ್ಳು ದಸ್ತಾವೇಜು ತಯಾರಿಸಿರುವುದಿಲ್ಲ, ನಾರಾಯಣ ತಿಮ್ಮಯ್ಯ ನಾಯ್ಕರವರಿಂದಲೇ ಕ್ರಯ ಪಡೆದಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

2. ವಾದಿಯವರ ಹೆಸರಿನಲ್ಲಿ ಬೆಳಕೆ ಗ್ರಾಮದ ಗಂಜಿಗೇರಿಯಲ್ಲಿ 5 ಎಕರೆ ಜಮೀನು ಮತ್ತು ನೂಜ್ ಗ್ರಾಮದಲ್ಲಿರುವ ಗಂಜಿಗೇರಿಯಲ್ಲಿ 3 ಎಕರೆ ಜಮೀನು ಇರುತ್ತದೆ. ವಾದಿಯವರು ಬೆಳಕೆಯಲ್ಲಿರುವ 5 ಎಕರೆ ಜಮೀನನ್ನು ಅವರ ತಂದೆಯಿಂದ ಖರೀದಿ ಮಾಡಿರುತ್ತಾರೆ. ಹಾಗೆ

ನೂಜ್ ನಲ್ಲಿರುವ 3 ಎಕರೆ ಜಮೀನನ್ನು ಸಹ ವಾದಿಯವರು ಅವರ ತಂದೆಯಿಂದ ಖರೀದಿ ಮಾಡಿರುತ್ತಾರೆ. ಈ ದಾವೆಯಲ್ಲಿರುವ ಜಮೀನಿನ ಸರ್ವೇ ನಂಬರ 2/9 ಬೆಳಕೆ ಗ್ರಾಮ, ಕ್ಷೇತ್ರ 1 ಎಕರೆ 8 ಗುಂಟೆ ಆಗಿರುತ್ತದೆ.

3. ವಾದಿಯವರಿಗೆ ಈಗ 57 ವರ್ಷ ವಯಸ್ಸಾಗಿರುತ್ತದೆ. ಸದ್ರಿಯವರು ಮಹಿಳಾ ಬ್ಯಾಂಕ್, ಭಟ್ಕಳದಲ್ಲಿ ವ್ಯವಸ್ಥಾಪಕರಾಗಿರುತ್ತಾರೆ. ವಾದಿಯವರಿಗೆ ಬ್ಯಾಂಕಿನಲ್ಲಿ ಕೆಲಸ ಇರುವುದರಿಂದ ಪದೇ ಪದೇ ನ್ಯಾಯಾಲಯಕ್ಕೆ ಬರಲು ಕಷ್ಟ ಆಗಿರುವುದರಿಂದ ನನಗೆ ಜಿಪಿಎ ಕೊಟ್ಟಿರುತ್ತಾರೆ. ವಾದಿಯವರು ತಾನು ಕೆಲಸ ಮಾಡುತ್ತಿರುವ ಬ್ಯಾಂಕಿನ ಪರವಾಗಿ ಜಿಪಿಎ ಪಡೆದು ಇದೇ ನ್ಯಾಯಾಲಯದಲ್ಲಿ ಹಾಜರಾಗಿ ಪ್ರಕರಣಗಳನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಬ್ಯಾಂಕಿನ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಬೇಕಾಗಿರುವುದರಿಂದ ಬರುತ್ತಾರೆ ಎಂದು ನುಡಿಯುತ್ತಾರೆ. ವಾದಿಯವರು ಈ ದಾವೆಯನ್ನು ದಾಖಲಿಸಿದ ಸಮಯದಲ್ಲಿ ನನಗೆ ಜಿಪಿಎ ಕೊಟ್ಟಿರುತ್ತಾರೆ. ಈ



ದಾವೆಯಲ್ಲಿರುವ ವಸ್ತು ವಿಷಯಗಳ ಬಗ್ಗೆ ವಾದಿಯವರಿಗಿಂತ ಹೆಚ್ಚು ನನಗೆ ಗೊತ್ತಿರುತ್ತದೆ. ವಾದಿಯವರು ಖುದ್ದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಾನು ಜಿಪಿಎ ಪಡೆದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲಾ ಎಂದರೆ ಸುಳ್ಳು.

4. ದಾವಾ ಆಸ್ತಿಗೆ ಸಂಬಂಧಿಸಿದಂತೆ ಅದರ ಪಹಣಿ ಪತ್ರಿಕೆ ಮತ್ತು ಮ್ಯುಟೇಶನ್ ಎಂಟ್ರಿಗಳನ್ನು ನೋಡಿರುತ್ತೇನೆ. ಅದೇ ರೀತಿ ದಾವಾ ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂಬ ಬಗ್ಗೆ ದಾಖಲಾತಿ ನೋಡಿರುತ್ತೇನೆ. ಅದೇ ರೀತಿ ದಾವಾ ಆಸ್ತಿಯಲ್ಲಿ ಯಾರು ಸಾಗುವಳಿದಾರರಿದ್ದರು ಎಂದು ನೋಡಿರುತ್ತೇನೆ. ಅದೇ ರೀತಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕೆ.ಡಿ.ಟಿ. ಹಿಸ್ಸಾ ನಕಾಶೆ, ಆಕಾರ ಬಂದ್, ಫಾರ್ಮ ನಂಬರ 1 ಮತ್ತು 4 ನ್ನು ನೋಡಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ

ಖರಾಬ ಉತಾರವನ್ನು ನೋಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ಯಾವ ಉದ್ದೇಶಕ್ಕೆ ಖರಾಬ ಬಿಟ್ಟಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಮಳೆ ನೀರು ಹರಿದು ಹೋಗಲು ಬಿಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತೆ ದಾವಾ ಆಸ್ತಿಯಲ್ಲಿ ಖರಾಬು ಯಾಕೆ ಬಿಟ್ಟಿದ್ದಾರೆ ಎಂಬ ಬಗ್ಗೆ ಕಂದಾಯ ಇಲಾಖೆಯಿಂದ ದಾಖಲಾತಿ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ದಾವಾ ಆಸ್ತಿಯ ಪೂರ್ವ ದಿಕ್ಕಿನಿಂದ ಉತ್ತರಕ್ಕೆ ಮಳೆ ನೀರು ತೋಡಿನ ಮೂಲಕ ಹರಿದು ಹೋಗುತ್ತದೆ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ರಾಷ್ಟ್ರೀಯ ಹೆದ್ದಾರಿ ಇರುತ್ತದೆ. ಪಶ್ಚಿಮ ದಿಕ್ಕಿನಲ್ಲಿ ಸರ್ವೇ ನಂಬರ 2/7 ರಲ್ಲಿರುವ ಜಮೀನು ಇರುತ್ತದೆ. ದಕ್ಷಿಣ ದಿಕ್ಕಿನಲ್ಲಿ ವಗೇರಿ ಜಾಗ ಇದ್ದು ಅದು ಮೊಹಮ್ಮದ್ ಗೌಸ್ ರವರಿಗೆ ಸೇರಿದ್ದಾಗಿರುತ್ತದೆ. ಉತ್ತರ ದಿಕ್ಕಿನಲ್ಲಿ ಮಂಜಪ್ಪ ಮಾದೇವ ನಾಯ್ಕರವರಿಗೆ ಸೇರಿದ ಜಮೀನು ಇರುತ್ತದೆ.

5. ದಾವಾ ಆಸ್ತಿಯಲ್ಲಿ ನಮೂದು ಮಾಡಿದ ಚತುರ್ಗಡಿಯ ಬಗ್ಗೆ ಮಾಹಿತಿಯನ್ನು ನಾನು ಖುದ್ದು ಕೊಟ್ಟಿರುತ್ತೇನೆ. ದಾವೆಯಲ್ಲಿ ಕಾಣಿಸಿರುವ ದಾವಾ ಆಸ್ತಿಯು ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ.



ಅದೇ ರೀತಿ ಚತುರ್ಗಡಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು .**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**